# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಜಿಎಂ\3491\2019\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10/11/2020

## ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ \ ಸಾರ್ವಜನಿಕ ನೌಕರರಾದ ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಹನಸಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 1)ಮುಖ್ಯೋಪಾಧ್ಯಾಯರಾದ ಶ್ರೀ.ಮೊಹಮ್ಮದ್ ರಫಿ.ಎಂ; ಎಸ್‌ಡಿಎಂಸಿ 2)ಅಧ್ಯಕ್ಷರಾದ ಶ್ರೀ.ಮಲ್ಲಿಕಾರ್ಜುನ ಎಂ ಗುಜ್ಜಳ; ಸದಸ್ಯರುಗಳಾದ 3)ಶ್ರೀ.ಶ್ರೀಕಾಂತಪ್ಪ ಜಿ ಜಕಾತಿ; 4) ಶ್ರೀಮತಿ.ಶೋಭಾ ಹೆಚ್ ಮಡಿವಾಳರ; ಮತ್ತು 5) ಶ್ರೀಮತಿ.ಬೀಮವ್ವ ಆರ್ ಬಜೇರಿ ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಗುಡಿಸಾಗರ ಗ್ರಾಮದ ನಿವಾಸಿಯಾದ ಶ್ರೀ.ಸಾವಿತ್ರಿ ವಿ ಕುಲಕರ್ಣಿ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಹನಸಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ.ಮೊಹಮ್ಮದ್ ರಫಿ.ಎಂ [ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ] ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಹನಸಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2019-20ರಲ್ಲಿ ಶೂ ಮತ್ತು ಸಾಕ್ಸ್ ಖರೀದಿಯಲ್ಲಿ ಎದುರುದಾರರು ಭ್ರಷ್ಟಾಚಾರ ಎಸಗಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ದೂರಿನ ಆಪಾದನೆಯನ್ನು ಅಲ್ಲಗಳೆಯುತ್ತಾ ಎಸ್‌ಡಿಎಂಸಿ ಠರಾವು \ ನಿರ್ಣಯದಂತೆ ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳನ್ನು ಖರೀದಿಸಿದೆಯೆಂದು ಹೇಳಿದ್ದಾರೆ.

4. ಹನಸಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 2019–20ನೇ ಸಾಲಿನ ಶೂ ಮತ್ತು ಸಾಕ್ಸ್ ಖರೀದಿ ಸಮಿತಿಯ ಅಧ್ಯಕ್ಷರಾದ ಶ್ರೀ.ಮಲ್ಲಿಕಾರ್ಜುನ ಎಂ ಗುಜ್ಜಳ ಹಾಗೂ ನಾಮ ನಿರ್ದೇಶಿತ ಸದಸ್ಯರುಗಳಾದ ಶ್ರೀ.ಶ್ರೀಕಾಂತಪ್ಪ ಜಿ ಜಕಾತಿ, ಶ್ರೀಮತಿ.ಶೋಭಾ ಹೆಚ್ ಮಡಿವಾಳರ ಮತ್ತು ಶ್ರೀಮತಿ.ಭೀಮವ್ವ ಆರ್ ಬಜೇರಿ, ರವರುಗಳನ್ನು ಕ್ರಮವಾಗಿ 2 ರಿಂದ 5ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಯಿತು. ಸದರಿಯವರುಗಳು ಸಲ್ಲಿಸಿದ ಪ್ರತ್ಯೇಕ ಆಕ್ಷೇಪಣೆಗಳಲ್ಲಿ –

2019–20ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಶೂ ಮತ್ತು ಸಾಕ್ಸ್ ಖರೀದಿ ಅನುದಾನದಲ್ಲಿ 1 ರಿಂದ 8ನೇ ವರ್ಗದ 240 ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ (ಲ್ಯಾನ್ಸರ್ ಕಂಪನಿಯ) ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು ಖರೀದಿಸಿ ಮಕ್ಕಳಿಗೆ ಹಂಚಿದೆ. ಸದರಿ ಖರೀದಿಯಲ್ಲಿ ಯಾವುದೇ ರೀತಿಯ ಭ್ರಷ್ಟಾಚಾರ ನಡೆದಿಲ್ಲವೆಂದು ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) 2019–20ನೇ ಸಾಲಿನಲ್ಲಿ ಸರ್ಕಾರದಿಂದ ಕೊಡಲ್ಪಟ್ಟ ಶೂ ಮತ್ತು ಸಾಕ್ಸ್ ಖರೀದಿ ಅನುದಾನದಲ್ಲಿ ಖರೀದಿ ಪ್ರಕ್ರಿಯೆ ನಡೆಸಲು ದಿನಾಂಕ:25/08/19ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹನಸಿ, ನವಲಗುಂದ ತಾಲ್ಲೂಕ್ ಇಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆ ನಡೆದಿದ್ದು, ಸದರಿ ಸಭೆಯಲ್ಲಿ ಖರೀದಿ ಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ನಾಮ ನಿರ್ದೇಶಿತ ಸದಸ್ಯರುಗಳನ್ನು ಆಯ್ಕೆ ಮಾಡಿ ಠರಾವನ್ನು ಹೊರಡಿಸಿದೆ. ಖರೀದಿ ಸಮಿತಿಯ ವಿವರಗಳು ಈ ಕೆಳಕಂಡಂತಿದೆ –

| ಕ್ರ.ಸಂ. | ಹೆಸರು ಶ್ರೀಯುತ\ ಶ್ರೀಮತಿ | ಹುದ್ದೆ |
|---|---|---|
| 1 | ಮಲ್ಲಿಕಾರ್ಜುನ ಮಾ ಗುಜ್ಜಳ, ಅಧ್ಯಕ್ಷರು, ಎಸ್‌ಡಿಎಂಸಿ [2ನೇ ಎದುರುದಾರರು] | ಖರೀದಿ ಸಮಿತಿಯ ಅಧ್ಯಕ್ಷರು |
| 2 | ಮಹಮ್ಮದ್ ರಫಿ, ಪ್ರಧಾನ ಗುರುಗಳು [1ನೇ ಎದುರುದಾರರು] | ಸದಸ್ಯ ಕಾರ್ಯದರ್ಶಿ |

BSM/3491/19



| | | |
|---|---|---|
| 3 | ಶ್ರೀಕಾಂತಪ್ಪ ಗೂ ಜಕಾತಿ, ಸದಸ್ಯರು, ಎಸ್‌ಡಿಎಂಸಿ [3ನೇ ಎದುರುದಾರರು] | ನಾಮ ನಿರ್ದೇಶಿತ ಸದಸ್ಯರು |
| 4 | ಶೋಭಾ ಹ ಮಡಿವಾಳರ, ಸದಸ್ಯರು, ಎಸ್‌ಡಿಎಂಸಿ[4ನೇ ಎದುರುದಾರರು] | |
| 5 | ಭೀಮವ್ವ ರ ಬಜೇರಿ, ಸದಸ್ಯರು, ಎಸ್‌ಡಿಎಂಸಿ [5ನೇ ಎದುರುದಾರರು] | |

2) ದಿನಾಂಕ:21/09/2019ರಂದು ನಡೆದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹನಸಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಠರಾವಿನಲ್ಲಿ 2019–20ನೇ ಶೈಕ್ಷಣಿಕ ಸಾಲಿನ ಶೂ ಮತ್ತು ಸಾಕ್ಸ್ ಖರೀದಿ ಬಗ್ಗೆ ತೀರ್ಮಾನ ಕೈಗೊಂಡಿದೆ. ಸದರಿ ಠರಾವು ಈ ಕೆಳಗಿನಂತಿದೆ–

| ಕ್ರ. ಸಂ. | ಚರ್ಚಿಸಿದ ವಿಷಯಗಳು (ಅಜೆಂಡಾ) | ತೆಗೆದುಕೊಂಡ ನಿರ್ಣಯಗಳು (ಠರಾವು) |
|---|---|---|
| 1 | 'ಒಂದು ಜೊತೆ ಶೂ ಮತ್ತು 2 ಜೊತೆ ಸಾಕ್ಸ್' ಖರೀದಿಸುವ ಕುರಿತು | "ಸನ್ 2019–20ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರದಿಂದ ಕೊಡಲ್ಪಡುವ ಉಚಿತ '1 ಜೊತೆ ಶೂ ಮತ್ತು 2 ಜೊತೆ ಸಾಕ್ಸ್' ಗಳ ಅನುದಾನದಿಂದ ನಮ್ಮ ಶಾಲೆಯಲ್ಲಿ ಓದುತ್ತಿರುವ 8ನೇ ವರ್ಗದ ಮಕ್ಕಳಿಗೆ ಉತ್ತಮ ಗುಣಮಟ್ಟದ 'ಶೂ ಮತ್ತು ಸಾಕ್ಸ್' ಗಳನ್ನು ಖರೀದಿಸಲು ಖರೀದಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಸಭೆಯಲ್ಲಿ ಚರ್ಚಿಸಲಾಯಿತು.<br>ಇದರಂತೆ, ಶಾಲೆಯಲ್ಲಿರುವ ಒಟ್ಟು ವಿದ್ಯಾರ್ಥಿಗಳು 240, ಇದರಲ್ಲಿ 1 ರಿಂದ 5ನೇ ತರಗತಿಗೆ ₹265/–ಗಳಂತೆ 156x265 = ₹41,340/– ಹಾಗೂ 6 ರಿಂದ 8ನೇ ತರಗತಿಗೆ ₹295/–ಗಳಂತೆ 84x₹295 = ₹24,780/–, ಒಟ್ಟು ₹66,120/–ಗಳಾಗುವುದು. |
| 2 | Lancer ಕಂಪನಿಯ ಶೂ ಖರೀದಿಸಿದ ಕುರಿತು | ಈ ಅನುದಾನದಿಂದ ಒಟ್ಟು 240 ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಕಂಪನಿ ಶೂ ಗಳನ್ನು ಖರೀದಿಸಲು ತೀರ್ಮಾನಿಸಿ, ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್, ಹುಬ್ಬಳ್ಳಿ ಸಂಸ್ಥೆಗೆ ಭೇಟಿ ನೀಡಿ Lancer (ಲ್ಯಾನ್ಸರ್) ಕಂಪನಿಯ ಶೂ ಗಳನ್ನು ಆಯ್ಕೆ ಮಾಡಿ ಎಲ್ಲಾ ಮಕ್ಕಳಿಗೆ ಅಳತೆಗನುಗುಣವಾಗಿ ವಿತರಿಸಲು ತಿಳಿಸಲಾಯಿತು ಹಾಗೂ ಶೂ ಮತ್ತು |

3) ಸಲೀಂ ಫುಟ್‌ವೇರ್, ಕುಬಸದ್ ಗಲ್ಲಿ, ಹುಬ್ಬಳ್ಳಿ –

19/09/2019

"QUOTATION

FOR THE YEAR 2019-20 SHOES & SOCKS

| Sl. No. | Class | Particulars | Rate Rs. |
|---|---|---|---|
| 1 | 1st to 5th | Shoe & 2 pair Socks | 285 |
| 2 | 6th to 8th | Shoe & 2 pair Socks | 320 |
| 3 | 9st to 10th | Shoe & 2 pair Socks | 345 |

4) ಶ್ರೀ ಆರೋಡಾ ಎಂಟರ್‌ಪ್ರೈಸಸ್, ನವಲಗುಂದ –

| ಕ್ರ.ಸಂ. | ವರ್ಗ | ಮೂರು ಕಂಪನಿಗಳ ಶೂ ಮತ್ತು ಸಾಕ್ಸ್‌ಗಳ ಕೊಟೇಷನ್ ಪ್ರತಿ | | |
|---|---|---|---|---|
| | | ಲಕಾನಿ | ಆಕ್ಷನ್ | ಪ್ಯಾರಾಗನ್ |
| 1 | 1–5 | 250 | 253 | 255 |
| 2 | 6–8 | 280 | 283 | 285 |
| 3 | 9–10 | 310 | 313 | 315 |

6) ಮೇಲೆ ಹೇಳಿದ ನಾಲ್ಕು ದರಪಟ್ಟಿಗಳ ಪೈಕಿ ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್, ಉಣಕಲ್, ಹುಬ್ಬಳ್ಳಿ ರವರು ಸಲ್ಲಿಸಿದ ದರಪಟ್ಟಿಯನ್ನು ಒಪ್ಪಿ ಸದರಿ ಸಂಸ್ಥೆಯಿಂದ ಶೂ\ ಸಾಕ್ಸ್‌ಗಳನ್ನು ಖರೀದಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ತೀರ್ಮಾನಿಸಿದೆ;

7) ಶೂ ಮತ್ತು ಸಾಕ್ಸ್‌ಗಳನ್ನು ಪೂರೈಸಿದ ಬಾಬ್ತು ₹66,120/–ಗಳಿಗೆ ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್, ಗುಲ್ಬರ್ಗ ಸಂಸ್ಥೆಯ ದಿನಾಂಕ ನಮೂದಿರದ ಟ್ಯಾಕ್ಸ್ ಇನ್‌ವಾಯ್ಸ್ ಸಂಖ್ಯೆ:397 ಲಭ್ಯವಿದೆ;

8) ಖರೀದಿ ಸಮಿತಿಯು ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯ ದರಪಟ್ಟಿಯನ್ನು ಒಪ್ಪಿ ಸದರಿ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿದ ದಾಖಲೆಗಳಿಲ್ಲ;

9) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ನಡವಳಿ ದಿ:25/08/19 ಮತ್ತು 21/09/19ಗಳನ್ವಯ ಶೂ ಮತ್ತು ಸಾಕ್ಸ್‌ಗಳ ಖರೀದಿಗೆ ಸಂಬಂಧಿಸಿದಂತೆ ನೋಂದಾಯಿತ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸುವ ಬಗ್ಗೆ ಯಾವುದೇ ತೀರ್ಮಾನ ಕೈಗೊಳ್ಳದಿರುವುದು ಕಂಡು ಬಂದಿದೆ;

10) ಕಡತದಲ್ಲಿರುವ ಎಲ್ಲಾ ದರಪಟ್ಟಿಗಳ ದಿನಾಂಕ ಒಂದೇ [19/09/19] ಆಗಿರುವುದಲ್ಲದೇ, ಏಕಕಾಲಕ್ಕೆ ತಯಾರಿಸಿದಂತೆ ಕಂಡು ಬಂದಿದೆ. ಶಾಲಾ ಮುಖ್ಯಗುರುಗಳಿಗೆ ಎಂದು ವಿಳಾಸಿಸಿದ ಕಡೆ ಇರುವ ಕೈಬರವಣಿಗೆಯು ಒಂದೇ ರೀತಿ ಕಾಣುತ್ತದೆ. ಸದರಿ ಎಲ್ಲಾ ಅಂಶಗಳನ್ವಯ, ದರಪಟ್ಟಿಯನ್ನು ಆಹ್ವಾನಿಸುವ ಬಗ್ಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ತೀರ್ಮಾನ ಇಲ್ಲದಿದ್ದರೂ,

BSA/35491/19



ಮುಂದೆ ಆಗಬಹುದಾದ ಕಾನೂನಿನ ತೊಡಕುಗಳಿಂದ ರಕ್ಷಿಸಿಕೊಳ್ಳುವ ಉದ್ದೇಶದಿಂದ ದರಪಟ್ಟಿಗಳನ್ನು ತಯಾರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

11) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ತೀರ್ಮಾನದನ್ವಯ ಸದರಿ ಖರೀದಿಯನ್ನು ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್, ಹುಬ್ಬಳ್ಳಿ ರವರಿಂದ ಮಾಡಲಾಗಿದೆಯೆಂದು ಹೇಳಿದ್ದು, ಖರೀದಿ ಬಾಬ್ತು ಒಟ್ಟು ₹66,120/–ಗಳ ಟ್ಯಾಕ್ಸ್ ಇನ್‌ವಾಯ್ಸ್ ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್, ಗುಲ್ಬರ್ಗ ಸಂಸ್ಥೆ ಹೆಸರಿನಲ್ಲಿರುವುದರಿಂದ, ಸದರಿ ಮೊತ್ತವನ್ನು ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್, ಗುಲ್ಬರ್ಗ ಸಂಸ್ಥೆಗೆ ನೀಡಿರುವುದು ಕಂಡು ಬಂದಿದೆ;

12) ಚೆಕ್‌ನಲ್ಲಿ ಒಟ್ಟು ₹66,120/–ನ್ನು ಸದರಿ ಸಂಸ್ಥೆಗೆ ಪಾವತಿ ಮಾಡಿದೆಯೆಂದು ಹೇಳಿದ್ದು, ಚೆಕ್ ಸಂಖ್ಯೆ ಮತ್ತು ದಿನಾಂಕವು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಭಾ ನಡವಳಿಯಲ್ಲಿ ಮತ್ತು ಟ್ಯಾಕ್ಸ್ ಇನ್‌ವಾಯ್ಸ್‌ನಲ್ಲಿ ದಾಖಲಾಗಿಲ್ಲ;

13) ಕಡತದಲ್ಲಿರುವ ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್, ಗುಲ್ಬರ್ಗ ಸಂಸ್ಥೆಯ ಟ್ಯಾಕ್ಸ್ ಇನ್‌ವಾಯ್ಸ್‌ನಲ್ಲಿ ದಿನಾಂಕ ನಮೂದಿಲ್ಲ. ಹಾಗೆಯೇ, ಯಾವ ಕಂಪನಿಯ ಶೂ ಮತ್ತು ಸಾಕ್ಸ್‌ಗಳನ್ನು ಸರಬರಾಜು ಮಾಡಿದೆಯೆಂಬ ವಿವರಗಳು ಸಹ ಸಂಸ್ಥೆಯ ಟ್ಯಾಕ್ಸ್ ಇನ್‌ವಾಯ್ಸ್‌ನಲ್ಲಿ ನಮೂದಾಗಿಲ್ಲ;

14) ಖರೀದಿಸಿದ ಶೂ ಮತ್ತು ಸಾಕ್ಸ್‌ಗಳನ್ನು ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಿದ ದಾಖಲೆಗಳಿಲ್ಲ;

15) ಒಟ್ಟು 240 ವಿದ್ಯಾರ್ಥಿಗಳಿಗೆ ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯು ಷೂ ಮತ್ತು ಸಾಕ್ಸ್‌ಗಳನ್ನು ಪೂರೈಕೆ ಮಾಡಿದೆಯೆಂದು ಹೇಳಿದ್ದು, ಟ್ಯಾಕ್ಸ್ ಇನ್‌ವಾಯ್ಸ್‌ನ ವಿವರಗಳು ಈ ಕೆಳಗಿನಂತಿದೆ –

| Sl.No. | Particulars | Qty. | Rate | Amount |
|---|---|---|---|---|
| 1 | Shoes & Socks | 156 | 265.00 | 41340.00 |
| 2 | Shoes & Socks | 84 | 295.00 | 24780.00 |
| **Total** | | | | **66120.00** |

16) ಟ್ಯಾಕ್ಸ್ ಇನ್‌ವಾಯ್ಸ್‌ನಲ್ಲಿ ಷೂ ಮತ್ತು ಸಾಕ್ಸ್‌ಗಳ ಸಂಖ್ಯೆಯನ್ನು (ಜೊತೆಯನ್ನು) ನಿಖರವಾಗಿ ನಮೂದಿಸಿಲ್ಲ;

17) ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯು ಷೂ ಮತ್ತು ಸಾಕ್ಸ್‌ಗಳು ಮೇಲೆ ಹೇಳಿದ ಸುತ್ತೋಲೆಯ ಅಂಶ–14 ರಿಂದ 16ರಲ್ಲಿ ನಿಗಧಿಪಡಿಸಿದ ವೈಶಿಷ್ಟತೆಗಳಿಗನುಗುಣವಾಗಿ ಇತ್ತೇ \ ಇದೆಯೇ ಎಂಬ ಬಗ್ಗೆ ದಾಖಲೆಗಳಿಲ್ಲ;

18) ಯಾವ ಕಂಪನಿಯ ಷೂ \ ಸಾಕ್ಸ್‌ಗಳು ಸರಬರಾಜು ಮಾಡಿದೆಯೆಂಬ ಬಗ್ಗೆ ದಾಖಲೆಗಳಿಲ್ಲ;

19) ಕಡತದಲ್ಲಿರುವ Test Certificate ಅನ್ವಯ ಸರಬರಾಜುದಾರರ ಹೆಸರು Lancer Footwear India Pvt. Ltd., ಎಂದಿದ್ದು, ಅದೇ ಕಂಪನಿಯವರು ತಯಾರಿಸಿದ ಷೂ\ ಸ್ಯಾಂಡಲ್ಸ್ \ ಸಾಕ್ಸ್‌ಗಳನ್ನೇ ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯು ಸರಬರಾಜು ಮಾಡಿದೆಯೇ ಎಂಬ ಬಗ್ಗೆ ದಾಖಲೆಗಳಿಲ್ಲ;

20) ಸುತ್ತೋಲೆಗೆ ಲಗತ್ತಿಸಿದ ಅನುಬಂಧದಲ್ಲಿ ಷೂ \ ಸಾಕ್ಸ್ ಗಳ ತಾಂತ್ರಿಕ ವಿವರಣೆ [Technical Specification] ಅನ್ವಯ ಸದರಿ ಷೂ \ ಸಾಕ್ಸ್ ಗಳು ಗುಣಮಟ್ಟ ಹೊಂದಿರುವ ಬಗ್ಗೆ ದಾಖಲೆಗಳಿಲ್ಲ. ಸುತ್ತೋಲೆಯ ಷರತ್ತಿನ ಕ್ರಮ ಸಂಖ್ಯೆ:3ರಲ್ಲಿ ಸೂಚಿಸಿದಂತೆ ಖರೀದಿಸಿದ ಷೂ ಮತ್ತು ಸಾಕ್ಸ್‌ಗಳು ಎಫ್‌ಡಿಡಿಐ (ನೋಯಿಡಾ) ರವರು ಪ್ರಮಾಣೀಕರಿಸಿರುವ ತಾಂತ್ರಿಕ ಗುಣಮಟ್ಟ ಹೊಂದಿದೆಯೇ ಎಂಬ ಬಗ್ಗೆ ದಾಖಲೆಗಳಿಲ್ಲ.

21) ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯು ಸುತ್ತೋಲೆಯ ಅಂಶ–15ರಲ್ಲಿ ಹೇಳಿದ ಪ್ರತಿಷ್ಠಿತ ಬ್ರಾಂಡ್‌ಗಳ ಅಧಿಕೃತ ಮಾರಾಟಗಾರರೇ ಎಂಬ ಬಗ್ಗೆ ದಾಖಲೆಗಳಿಲ್ಲ;

22) 2019–20ನೇ ಶೈಕ್ಷಣಿಕ ಸಾಲಿಗೆ ಷೂ ಮತ್ತು ಸಾಕ್ಸ್‌ಗಳನ್ನು ಖರೀದಿಸಬೇಕಿದ್ದು, ಸುತ್ತೋಲೆಯ ಅಂಶ–8ರನ್ವಯ ಖರೀದಿ ಪ್ರಕ್ರಿಯೆಯು ಜುಲೈ, 15 ರಿಂದ ಜುಲೈ, 30 ರೊಳಗಾಗಿ ಪೂರ್ಣಗೊಳಿಸಬೇಕು. ಸದರಿ ದೂರಿನಲ್ಲಿ ಎದುರುದಾರರು ಖರೀದಿ ಪ್ರಕ್ರಿಯೆಯನ್ನು ಬಹಳಷ್ಟು ವಿಳಂಬವಾಗಿ ಆಗಸ್ಟ್–ಸೆಪ್ಟೆಂಬರ್, 2019ರಲ್ಲಿ ಪ್ರಾರಂಭಿಸಿದ್ದಾರೆ. ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯು ಷೂ ಮತ್ತು ಸಾಕ್ಸ್‌ಗಳನ್ನು ಸರಬರಾಜು ಮಾಡಿದ ದಿನಾಂಕವು ಎಲ್ಲಿಯೂ ಲಭ್ಯವಿಲ್ಲದ ಕಾರಣ, ಷೂ ಮತ್ತು ಸಾಕ್ಸ್‌ಗಳ ಸರಬರಾಜು ದಿನಾಂಕ ಯಾವುದೆಂದು ಸ್ಪಷ್ಟವಾಗುವುದಿಲ್ಲ;

23) ಶ್ರೀ ಸಂಗಮೇಶ್ವರ ಎಂಟರ್‌ಪ್ರೈಸಸ್ ಸಂಸ್ಥೆಯು ನೀಡಿದ ಬಿಲ್ಲಿನ ಮೊತ್ತದ ಮೇಲೆ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆಯನ್ನು ಕಟಾವಣೆ ಮಾಡಿಲ್ಲ;

24) ಸರಬರಾಜುದಾರರು ಪೂರೈಕೆ ಮಾಡಿದ ಷೂ ಮತ್ತು ಸಾಕ್ಸ್‌ಗಳನ್ನು ದಾಸ್ತಾನಿಗೆ ತೆಗೆದುಕೊಂಡ ದಾಖಲೆಯಿಲ್ಲ. ಕಾರಣ, ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ 164 ಮತ್ತು 165ನ್ನು ಪಾಲನೆ ಮಾಡಿಲ್ಲವೆಂದು ಕಂಡು ಬಂದಿದೆ;

25) ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಖರೀದಿ ಬಳಿಕ ಪ್ರಮಾಣ ಪತ್ರ ಮತ್ತು ಖರೀದಿ ಸ್ವೀಕೃತಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಿದ ದಾಖಲೆಗಳಿಲ್ಲ;

26) ಕಾರಣ, ಸದರಿ ಖರೀದಿ ಪ್ರಕ್ರಿಯೆಯಲ್ಲಿ ಮೇಲೆ ಹೇಳಿದ ಸುತ್ತೋಲೆಯಲ್ಲಿನ ಅಂಶಗಳನ್ನು ಪಾಲನೆ ಮಾಡದೇ ಇರುವುದು ಹಾಗೂ ಕಳಪೆ ಗುಣಮಟ್ಟದ ಷೂ\ ಸಾಕ್ಸ್‌ಗಳನ್ನು ಖರೀದಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

27) 1ನೇ ಎದುರುದಾರರು ಶಾಲಾ ಮುಖ್ಯೋಪಾಧ್ಯಾಯರು ಮತ್ತು ಖರೀದಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಸರ್ಕಾರಿ ನೌಕರರಾಗಿ ಪರಿಪೂರ್ಣ ನಿಷ್ಠೆ, ಕರ್ತವ್ಯ ಪರತೆಯನ್ನು ತೋರದೇ

